## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ

**Spl. CASE: 33/2023**

**ಫ್ರಾ.ಸಾ. 02**
**ದೋ.ಸಾ. 13**

| | | |
|---|---|---|
| ಸಾಕ್ಷಿಯ ಹೆಸರು | : | ನಾಗರಾಜು |
| ತಂದೆಯ ಹೆಸರು | : | ಲೇಟ್ ಗಂಟ್ಲರೆಡ್ಡಿ |
| ವಯಸ್ಸು | : | 58 ವರ್ಷ |
| ಉದ್ಯೋಗ | : | ಪಿ.ಎಸ್.ಐ ಶಿಡ್ಲಘಟ್ಟ ಗ್ರಾಮಾಂತರ ಪಿ.ಎಸ್ |
| ವಾಸ | : | ಶಿಡ್ಲಘಟ್ಟ |

**ದಿನಾಂಕ 21-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1). ನಾನು ದಿನಾಂಕ 21.08.2022 ರಿಂದ ದಿನಾಂಕ 02.02.2023 ರ ತನಕ ನಾನು ಗುಡಿಬಂಡೆ ಪಿ ಎಸ್ ನಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 29.10.2022 ರಂದು ಫ್ರಾಸಾ -1 ರವರ ಮನವಿ ಮೇರೆಗೆ ಪೊಲೀಸ್ ಉಪ ಅಧೀಕ್ಷಕರು ಚಿಕ್ಕಬಳ್ಳಾಪು ಉಪ ವಿಭಾಗ ರವರು ಈ ಪ್ರಕರಣದ ತನಿಖೆಯನ್ನು ವಹಿಸಿಕೊಳ್ಳುವಂತೆ ಲಿಖಿತ ಆದೇಶ ಮಾಡಿದ ಮೇರೆಗೆ ನಾನು ಈ ಪ್ರಕರಣದ ಕಡತವನ್ನು ಫ್ರಾಸಾ -1 ರವರಿಂದ ಸ್ವೀಕರಿಸಿ ಅಲ್ಲಿಯವರೆಗೆ ಆದ ಪ್ರಕರಣದ ತನಿಖೆಯನ್ನು ಪರಿಶೀಲಿಸಿರುತ್ತೇನೆ. ಸಾಕ್ಷಿ ಮನವಿ ಮತ್ತು ಆದೇಶವನ್ನು ನೋಡಿ ಗುರುತಿಸಿದ್ದು,

ಅವುಗಳನ್ನು **ನಿಪಿ– 10** ಎಂದು ಗುರುತಿಸಲಾಯಿತು. ನಂತರ ಅದೇ ದಿನ ಪಂಚ ಸಾಕ್ಷಿಗಳು ಮತ್ತು ಫ್ರಾಸಾ1 ರವರಿಗೆ ತನಿಖೆಗೆ ಸಹಕರಿಸಿದ ಸಿಬ್ಬಂದಿಗಳ ಹೇಳಿಕೆಗಳನ್ನು ದಾಖಲಿಸಿರುತ್ತೇನೆ.

3. ದಿ. 29.10.2022 ರಂದು ನಾನು ಅಮಾನತ್ತು ಪಡಿಸಿಕೊಂಡಿದ್ದ ಮಾಲಿನ ಇನ್ವೆಂಟರಿ ಹಾಗೂ Correctness Certificate ಪಡೆದುಕೊಳ್ಳಲು ಮಾನ್ಯ ವಿಶೇಷ ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸಿಕೊಂಡಿದ್ದು ಅದರತೆ ದಿನಾಂಕ 02.11.2022 ರಂದು ನ್ಯಾಯಾಲಯದ ಆದೇಶವನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿ ಸದರಿ ದಾಖಲೆಗಳನ್ನು ನೋಡಿ ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಒಟ್ಟಾರೆಯಾಗಿ **ನಿಪಿ–11** ಎಂದು ಗುರುತಿಸಲಾಯಿತು.

4. ಅದರಂತೆ ದಿ.05.11.2022 ರಂದು ಗುಡಿಬಂಡೆ JMFC ನ್ಯಾಯಾಧೀಶರ ಮುಂದೆ ಮಾಲನ್ನು ಹಾಜರುಪಡಿಸಿ Correctness Certificate ಅನ್ನು ಪಡೆದುಕೊಂಡಿರುತ್ತೇನೆ. ಆ ಕಾಲಕ್ಕೆ ಭಾವ ಚಿತ್ರಗಳನ್ನು ಸಹ ತೆಗೆದಿರುತ್ತೇನೆ. ಸದರಿ ಸಮಯದಲ್ಲಿ ಮಾನ್ಯ ನ್ಯಾಯಾಧೀಶರು ಎಪ್ ಎಸ್ ಎಲ್ ಗೆ ಕಳುಹಿಸುವ ಸಲುವಾಗಿ 90 ಗ್ರಾಂ ಗಾಂಜಾವನ್ನು ಬೇರ್ಪಡಿಸಿರುತ್ತಾರೆ. ನಂತರ ಎರಡೂ ಬಗೆಯ ಗಾಂಜಾ ಪ್ಯಾಕೇಟ್‌ಗಳನ್ನು ಮುಂದಿನ ಕ್ರಮಕ್ಕಾಗಿ ಪ್ರತ್ಯೇಕವಾಗಿ ಪ್ಯಾಕ್ ಮಾಡಿ AS (CJ Jr Division), Gudibande ಅಂತ ಸೀಲ್ ಮಾಡಿ ನಮ್ಮ ವಶಕ್ಕೆ ಪಡೆಯಲಾಯಿತು. ಸಾಕ್ಷಿ Correctness Certificate ಹಾಗೂ ಪೋಟೋಗಳನ್ನು ನೋಡಿ

ಗುರುತಿಸಿದ ಮೇರೆಗೆ ಅವುಗಳನ್ನು ಒಟ್ಟಾರೆಯಾಗಿ **ನಿಪಿ–12** ಎಂದು ಗುರುತಿಸಲಾಯಿತು. ಫೊಟೋಗಳನ್ನು ತೆಗೆದ ಮುಖ್ಯ ಪೇದೆ ಚಾಸಾ–4 ರವರ ಹೇಳಿಕೆಯನ್ನು ಹಾಗೂ 65(ಬಿ) ರ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿ ಸದರಿ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು **ನಿಪಿ–13** ಎಂದು, ಸಾಕ್ಷಿಯ ಸಹಿಯನ್ನು **ನಿಪಿ–13 (ಎ)**, ಎಂದು ಹಾಗೂ ಚಾಸಾ–4 ರವರ ಸಹಿಯನ್ನು **ನಿಪಿ–13 (ಬಿ)** ಎಂದು ಗುರುತಿಸಲಾಯಿತು.

5. ದಿ.07.11.2022 ರಂದು ಪಂಚನಾಮೆಯ ಕಾಲಕ್ಕೆ ಮಾದರಿಗಾಗಿ ತೆಗೆದಿದ್ದ ಸ್ಯಾಂಪಲ್ ಅನ್ನು ಎಫ್ ಎಸ್ ಎಲ್ ಪರೀಕ್ಷೆಗಾಗಿ ನಮ್ಮ ಸಿಬ್ಬಂದಿ ಚಾಸಾ–9 ಪಿ.ಸಿ–267 ರವರಿಗೆ ಪಾಸ್ ಪೋರ್ಟ್ ಹಾಗೂ acknowledgment ಅನ್ನು ನೀಡಿ ಕಳುಹಿಸಿಕೊಟ್ಟಿದ್ದು, ಸದರಿ ರವರು ಅದನ್ನು ಎಫ್ ಎಸ್ ಎಲ್ ಕಛೇರಿಯಲ್ಲಿ ತಲುಪಿಸಿ ಸ್ವೀಕೃತಿಯನ್ನು ಪಡೆದು ತಂದು ನನ್ನ ಸಮಕ್ಷಮದಲ್ಲಿ ಹಾಜರುಪಡಿಸಿದ್ದನ್ನು ಸ್ವೀಕರಿಸಿ ಕಡತದಲ್ಲಿ ಅಳವಡಿಸಿರುತ್ತೇನೆ. ಅದೇ ರೀತಿ ದಿ.18.11.2022 ರಂದು ನ್ಯಾಯಾಧೀಶರು, correctness certificate ಕಾಲಕ್ಕೆ ತೆಗೆದುಕೊಂಡು ಮಾದರಿ ಗಾಂಜಾವನ್ನು ಎಫ್ ಎಸ್ ಎಲ್ ಪರೀಕ್ಷೆಗಾಗಿ ನಮ್ಮ ಸಿಬ್ಬಂದಿ ಚಾಸಾ–6 ಪಿ.ಸಿ–203 ರವರಿಗೆ ಪಾಸ್ ಪೋರ್ಟ್ ಹಾಗೂ acknowledgment ಅನ್ನು ನೀಡಿ ಕಳುಹಿಸಿಕೊಟ್ಟಿದ್ದು, ಸದರಿ ರವರು ಅದನ್ನು ಎಫ್ ಎಸ್ ಎಲ್ ಕಛೇರಿಯಲ್ಲಿ ತಲುಪಿಸಿ

ಸ್ವೀಕೃತಿಯನ್ನು ಪಡೆದು ತಂದು ನನ್ನ ಸಮಕ್ಷಮದಲ್ಲಿ ಹಾಜರುಪಡಿಸಿದ್ದನ್ನು ಸ್ವೀಕರಿಸಿ ಕಡತದಲ್ಲಿ ಅಳವಡಿಸಿರುತ್ತೇನೆ. ಸಾಕ್ಷಿ ಎರಡು ಸ್ವೀಕೃತಿಗಳು ಹಾಗೂ ಒಂದು ರಹದಾರಿ ಪತ್ರವನ್ನು ಗುರುತಿಸಿದ ಮೇರೆಗೆ ಅವುಗಳನ್ನು ಒಟ್ಟಾರೆಯಾಗಿ **ನಿಪಿ-14** ಎಂದು ಗುರುತಿಸಲಾಯಿತು.

6. ನಂತರ ತಲೆಮಡಿಸಿಕೊಂಡಿದ್ದ ಆರೋಪಿಯ ಪತ್ತೆಗಾಗಿ ಚಾಸಾ-6 ರವರನ್ನು ನೇಮಿಸಿದ್ದು, ಆರೋಪಿಯು ಪತ್ತೆಯಾಗಿರುವ ಬಗ್ಗೆ ದಿ.15.01.2023 ರಂದು ವರದಿ ನೀಡಿದ್ದು ಅದನ್ನು ಸ್ವೀಕರಿಸಿರುತ್ತೇನೆ. ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಗುರುತಿಸಿದ ಮೇರೆಗೆ **ನಿಪಿ-15** ಎಂದು ಗುರುತಿಸಲಾಯಿತು.

7. ನಂತರ ದಿ.27.11.2022 ರಂದು 1 ನೇ ಆರೋಪಿ ವೆಂಕಟೇಶ್ ರವರು ನಿರೀಕ್ಷಣ ಜಾಮೀನನ್ನು ಪಡೆದು ಠಾಣೆಗೆ ಹಾಜರಾದ ಮೇರೆಗೆ ಆತನ ವಿರುದ್ಧ ದಸ್ತಗಿರಿ ಕ್ರಮ ಅನುಸರಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಆ ಕಾಲಕ್ಕೆ ಆರೋಪಿಯನ್ನು ವಿಚಾರಣೆಗೆ ಒಳಪಡಿಸಿ ಆತನ ಸ್ವಇಚ್ಛಾ ಹೇಳಿಕೆಯನ್ನು ಪಡೆದಿರುತ್ತೇನೆ.

8. ದಿ.15.12.2022 ರಂದು ಉಳಿದ ಗಾಂಜಾವನ್ನು ವಿಲೇವಾರಿ ಮಾಡುವ ಸಲುವಾಗಿ ನ್ಯಾಯಾಲಯದ ಆದೇಶ ಪಡೆಯಲು ಮನವಿಯನ್ನು ಸಲ್ಲಿಸಿ ಅನುಮತಿಯನ್ನು ಪಡೆದುಕೊಂಡು, ಅದರಂತೆ ಜಿಲ್ಲಾ ಸಶಸ್ತ್ರ ಮೀಸಲು ಪಡೆ ರವರ ವಶಕ್ಕೆ ದಿ.05.01.2023 ರಂದು ವಹಿಸಿಕೊಟ್ಟಿರುತ್ತೇನೆ. ಸಾಕ್ಷಿ ಮನವಿ ಪತ್ರ, ನ್ಯಾಯಾಲಯದ ಆದೇಶ ಹಾಗೂ ಜಿಲ್ಲಾ ಸಶಸ್ತ್ರ ಮೀಸಲು ಪಡೆಯವರು ನೀಡಿದ

ಹಿಂಬರಹದ ಪ್ರತಿಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಒಟ್ಟಾರೆಯಾಗಿ **ನಿಪಿ-16** ಎಂದು ಗುರುತಿಸಲಾಯಿತು.

9. ದಿ. 02.02.2023 ರಂದು FSL ವರದಿಗಳನ್ನು ಸ್ವೀಕರಿಸಿ, ನಂತರ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿ ಸದರಿ ದಾಖಲೆಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಕ್ರಮವಾಗಿ **ನಿಪಿ-17** ಹಾಗೂ **ನಿಪಿ-18,** ಸಾಕ್ಷಿಯ ಸಹಿಗಳನ್ನು **ನಿಪಿ-17(ಎ)** ಹಾಗೂ **ನಿಪಿ-18(ಎ)** ಎಂದು ಗುರುತಿಸಲಾಯಿತು. ಘಟನಾ ಸ್ಥಳದ ಸಂಬಂಧಿಸಿದ RTC ಅನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿ ಸದರಿ RTC ಅನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ-19** ಎಂದು ಗುರುತಿಸಲಾಯಿತು.

10. ಮಾದರಿಗಾಗಿ ಕಳುಹಿಸಿದ ಗಾಂಜಾ ಮಾಲನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರು ಪಡಿಸಿದ ಸೀಲಾದ ಸುಸ್ಥಿತಿಯಲ್ಲಿರುವ ಒಂದು ಬಟ್ಟೆಯ ಪ್ಯಾಕೇಟ್ ಮೇಲೆ ಅಂಟಿಸಿರುವ ಚೀಟಿಯಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ನ್ಯಾಯಾಲಯದ ಅನುಮತಿ ಮೇರೆಗೆ ಸದರಿ ಪ್ಯಾಕೇಟ್ ಅನ್ನು ತೆಗೆದು ಅದರೊಳಗಿರುವ ಗಾಂಜಾ ಸೊಪ್ಪನ್ನು ತೋರಿಸಿದ್ದು,ಅದನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು **ಮು.ಮಾ .2** ಎಂದು ಗುರುತಿಸಲಾಯಿತು. ಮತ್ತೊಂದು ಗಾಂಜಾ ಪ್ಯಾಕೇಟ್ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮು.ಮಾ .1 ಎಂದು ಗುರುತಿಸಲಾಗಿದೆ.

11. ಎರಡನೇ ಆರೋಪಿ ತನಿಖಾ ಕಾಲದಲ್ಲಿ ತಲೆ ಮರಿಸಿಕೊಂಡು ತನಿಖೆಗೆ ಲಭ್ಯವಾಗದ ಕಾರಣ, ಪ್ರಕರಣದ ತನಿಖೆಯನ್ನು ಪೂರೈಸಿದ್ದು, ಆರೋಪಿಗಳ ವಿರುದ್ಧ ಸಾಕ್ಷ್ಯಧಾರಗಳು ಕಂಡು ಬಂದ ಕಾರಣ 2 ನೇ ಆರೋಪಿ ತಲೆ ಮರಿಸಿಕೊಂಡಿರುವುದಾಗಿ ನಮೂದಿಸಿ ಆರೋಪಿಗಳ ವಿರುದ್ದ ದೋಷರೋಪಣ ಪತ್ರವನ್ನು ಘನ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲುಃ 2 ನೇ ಆರೋಪಿ ವಕೀಲರಾದ ಶ್ರೀ ಪಿ.ಬಿ.ಎಸ್ ರವರಿಂದ**

12. ನಿಪಿ–19 ರ RTC ಅನ್ನು ಪಡೆಯುವ ಮುನ್ನ ರೆವೆನ್ಯೂ ಅದಕಾರಿಗಳಿಗೆ ಮನವಿ ಸಲ್ಲಿಸಿದ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. ನಿಪಿ–19 ರ RTC ಯಲ್ಲಿ 3 ಎಕರೆ 16 ಗುಂಟೆ ಜಮೀನು 4 ಜನರ ಜಂಟಿ ಖಾತೆಯಲ್ಲಿದೆ ಎಂದರೆ ಸರಿ. ಆದ್ದರಿಂದ ಸದರಿ 4 ಜನರು ಸಹ ಸದರಿ ಜಮೀನಿನ ಜಂಟಿ ಮಾಲೀಕರು ಎಂದರೆ ಸರಿ. ಸಾಕ್ಷಿ ಬಾಜುದಾರರು ಹೇಳಿದ ಮೇರೆಗೆ ಸದರಿ ಜಮೀನು 1 ನೇ ಆರೋಪಿಗೆ ಸೇರಿದ್ದು ಎಂದು ಸ್ವತಃ ನುಡಿಯುತ್ತಾರೆ. ನಿಪಿ–19 ರ RTC ಯಲ್ಲಿ 1 ನೇ ಆರೋಪಿಗೆ ಸೇರಿದ ಜಮೀನಿನ ನಿರ್ದಿಷ್ಟ ವಿಸ್ತೀರ್ಣವನ್ನು ನಮೂದಿಸಿಲ್ಲ ಎಂದರೆ ಸರಿ. ನಿಪಿ–19 ರ RTC ಯಲ್ಲಿರುವ ಉಳಿದ ಮಾಲೀಕರನ್ನು ವಿಚಾರಣೆ ಮಾಡಿ, ಸಾಕ್ಷಿದಾರರನ್ನಾಗಲೀ ಅಥವಾ ಆರೋಪಿಗಳನ್ನಾಗಲೀ ಎಂದು ಪರಿಗಣಿಸಿಲ್ಲ ಎಂದರೆ ಸರಿ. ನಾನು ವಿಚಾರಣೆ ಮಾಡಿದ ಬಾಜುದಾರರ ಹೇಳಿಕೆ ಪಡೆದು ಅವರನ್ನು ಈ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿಸಿಲ್ಲ

ಎಂದರೆ ಸರಿ. ನಿಪಿ–6 ರ ಪಂಚನಾಮೆಯಲ್ಲಿ ನಮೂದಿಸಿರುವ 1 ಎಕರೆ ಜಮೀನಿಗೆ ಸಂಬಂಧಿಸಿದಂತೆ RTC ಅನ್ನು ಹಾಜರು ಪಡಿಸಿಲ್ಲ ಎಂದರೆ ಸರಿ.

13. ನಾನು ನನ್ನ ತನಿಖಾವಧಿಯಲ್ಲಿ ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದೆ. ಘಟನಾ ಸ್ಥಳಕ್ಕೆ ಭೇಟಿ ನೀಡಿದ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಿಲ್ಲ ಎಂದರೆ ಸರಿ. ನಾನು ಸ್ಥಳಕ್ಕೆ ಭೇಟಿ ನೀಡದೇ ಇದ್ದರೂ ಸಹ ಈ ಬಗ್ಗೆ ಸುಳ್ಳು ಸಾಕ್ಷ್ಯ ನೀಡುತ್ತಿದ್ದೇನೆ ಎಂದರೆ ಸರಿ. ನಿಪಿ –6 ರ ಪಂಚನಾಮೆ ಹಾಗೂ ಪಿರ್ಯಾದುನಲ್ಲಿ ಜಮೀನಿನ ಯಾವ ಭಾಗದಲ್ಲಿ ಗಾಂಜಾ ಗಿಡಗಳನ್ನು ಬೆಳೆಸಲಾಗಿತ್ತು ಎಂಬ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ಗಾಂಜಾ ಗಿಡಗಳು ಬೆಳೆದಿದ್ದ ಜಾಗದ ಜಮೀನಿನ ನಕ್ಷೆಯನ್ನಾಗಲೀ ಅಥವಾ ಸ್ಥಳ ಪರಿಶೀಲನೆ ಕಾಲಕ್ಕೆ ಗಾಂಜಾ ಗಿಡಗಳ ಬೆಳೆದಿದ್ದ ಜಾಗದ ಕಚ್ಚಾ ನಕ್ಷೆಯನ್ನು ನಮೂದಿಸಿಲ್ಲ ಎಂದರೆ ಸಾಕ್ಷಿಯು ಪಂಚನಾಮೆಯಲ್ಲಿ ಸ್ಥಳದ ರೇಖಾಂಶ ಮತ್ತು ಅಕ್ಷಾಂಶವನ್ನು ನಮೂದಿಸಿರುವುದಾಗಿ ನುಡಿಯುತ್ತಾರೆ. ನಿಪಿ–7 ರ ಫೋಟೋಗಳಲ್ಲಿ ಘಟನಾ ಸ್ಥಳದ GPS ಅನ್ನು ಅಳವಡಿಸಿ ಫೋಟೋ ತೆಗೆದ ಬಗ್ಗೆ ನಮೂದು ಇಲ್ಲ ಎಂದರೆ ಸರಿ.

14. ನಿಪಿ–7 ರ ಫೋಟೋಗಳಲ್ಲಿ ಗಾಂಜಾ ಗಿಡಗಳು ಬೆಳೆದು ನಿಂತಿರುವ ಬಗ್ಗೆ ಕಂಡು ಬರುವುದಿಲ್ಲಎಂದರೆ ಸರಿ. ನಿಪಿ –6 ಪಂಚನಾಮೆಯಲ್ಲಿ ಗಾಂಜಾ ಗಿಡಗಳ ಉದ್ದ, ಎತ್ತರ, ವಯಸ್ಸು ಗಳನ್ನು ನಮೂದಿಸಿಲ್ಲ ಎಂದರೆ ಸರಿ. ಗಾಂಜಾ ಗಿಡಗಳನ್ನು ಪ್ರತ್ಯೇಕವಾಗಿ ತೂಕ ಮಾಡಿಲ್ಲ ಎಂದರೆ ಸರಿ. ಅದೇ ರೀತಿ ಫೋಟೋಗಳಲ್ಲಿ ಗಾಂಜಾ ಗಿಡಗಳನ್ನು

ಕಿತ್ತಿರುವ ಜಾಗದ ನಿಶಾನೆ ಕಂಡು ಬರುವುದಿಲ್ಲ ಎಂದರೆ ಸರಿ. ಅದೇ ರೀತಿ ಪೋಟೋಗಳಲ್ಲಿ ಗಾಂಜಾ ಗಿಡಗಳನ್ನು ಕೀಳುತ್ತಿರುವ ದೃಶ್ಯ ಕಂಡು ಬರುವುದಿಲ್ಲ ಎಂದರೆ ಸರಿ. ಗಾಂಜಾ ಗಿಡದ ಸೊಪ್ಪು, ಹೂವು ಮತ್ತು ಕಾಯಿಗಳನ್ನು ಕಾಂಡದಿಂದ ಪ್ರತ್ಯೇಕಿಸಿ ತೂಕ ಮಾಡಿರುವುದಿಲ್ಲ ಎಂದರೆ ಸರಿ.

15. ಯಾವುದೇ ವ್ಯಕ್ತಿ ಮತ್ತೊಬ್ಬರ ಜಮೀನನ್ನು ವ್ಯವಸಾಯಕ್ಕೆ ಪಡೆದರ ದಾಖಲೆಗಳ ಮೂಲಕ ಮಾಡಿಕೊಳ್ಳಬೇಕು ಎಂದರೆ ಬಾಯಿ ಮಾತಿನ ಮೂಲಕವು ಸಹ ಮಾಡಿಕೊಳ್ಳಬಹುದು ಎನ್ನುತ್ತಾರೆ. ಆರೋಪಿ 1 ಮತ್ತು 2 ರ ನಡುವೆ ಜಮೀನಿನ ಬಗ್ಗೆ ಯಾವುದಾದರು ದಾಖಲೆಗಳು ಆಗಿರುವ ಬಗ್ಗೆ ಪರಿಶೀಲಿಸಿರುವುದಿಲ್ಲ ಎಂದರೆ ಸರಿ.

16. ದಿ.07.11.2022 ರಂದು FSL ಪರೀಕ್ಷೆಗೆ ಮಾದರಿಯನ್ನು ಸ್ವೀಕರಿಸಿರುವ ಬಗ್ಗೆ ಸ್ವೀಕೃತಿಯಿದ್ದು, ಕಳುಹಿಸಿರುವ ಬಗ್ಗೆ ಮನವಿಯಾಗಲೀ ಪಾಸ್ ಪೋರ್ಟ್ ಆಗಲಿ ಇಲ್ಲ ಎಂದರೆ ಸರಿ. FSL ಪರೀಕ್ಷೆಗೆ ಕಳುಹಿಸಿರುವ ಮಾದರಿ ಗಾಂಜಾವನ್ನು ಕಾಂಡ ಮತ್ತು ರೆಂಬೆಗಳಿಂದ ಬೇರ್ಪಡಿಸಿಲ್ಲ ಎಂದರೆ ಸರಿ. ಸರ್ವೆ ನಂ.63 ಮತ್ತು 64 ಜಮೀನುಗಳು ಅಕ್ಕಪಕ್ಕದಲ್ಲಿ ಇವೆ ಎಂದರೆ ನನಗೆ ತಿಳಿದಿಲ್ಲ. ಸರ್ವೆ ನಂ.63 ರಲ್ಲಿ ಸುಮಾರು 100 ಎಕರೆ ಜಾಗ ಸರ್ಕಾರಕ್ಕೆ ಸೇರಿದ್ದು ಎಂದರೆ ನನಗೆ ತಿಳಿದಿಲ್ಲ. ನಾನು ಪಂಚರು ಹಾಗೂ ಸಿಬ್ಬಂದಿಗಳಿಂದ ನಾನು ಯಾವುದೇ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿಗಳಿಗೂ ಯಾವುದೇ ಸಂಬಂಧವಿಲ್ಲದೇ ಇದ್ದರೂ ಸಹ ಠಾಣಾ ಅಂಕಿ ಅಂಶಗಳಿಗೋಸ್ಕರ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಆರೋಪಿ 1 ನೇ ಆರೋಪಿಯಿಂದ ಜಮೀನನ್ನು ಗುತ್ತಿಗೆ ಪಡೆದಿಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲುಃ 1 ನೇ ಆರೋಪಿ ಪರ ವಕೀಲರಾದ ಶ್ರೀ ಬಿ.ವೈ.ಕೆ ರವರಿಂದ**

17. ನಾನು ಈ ಕೇಸಿನ ತನಿಖೆಯನ್ನು ದಿ.02.02.2023 ರಂದು ಪೂರ್ಣಗೊಳಿಸಿರುತ್ತೇನೆ. ಅದೇ ದಿನ FSL ವರದಿಗಳನ್ನು ಸ್ವೀಕರಿಸಿರುತ್ತೇನೆ ಎಂದರೆ ಸರಿ. ಪಂಚನಾಮೆ ಜರುಗಿಸಿದ ದಿನ ಆರೋಪಿಗಳು ಘಟನಾ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿ. ನಿಪಿ–7ರ ಫೋಟೋಗಳಲ್ಲಿ ಕಂಡು ಬರುವ ವ್ಯಕ್ತಿಗಳನ್ನು ವಿಚಾರಣೆ ಮಾಡಿ, ಹೇಳಿಕೆ ಪಡೆದು ದೋಷರೋಪಣ ಪತ್ರದಲ್ಲಿ ಸಾಕ್ಷಿದಾರರನ್ನಾಗಿಸಿಲ್ಲ ಎಂದರೆ ಸರಿಯಲ್ಲ. ಪಂಚರು ನಮ್ಮ ಠಾಣೆಯ stock witnesses ಎಂದರೆ ಸರಿಯಲ್ಲ.

18. ನಿಪಿ–6 ರ ಪಂಚನಾಮೆಯಲ್ಲಿ ವಶಪಡಿಸಿಕೊಂಡ ಮಾಲಿನ ತೂಕವನ್ನು 8 ಕೆ.ಜಿ 550 ಗ್ರಾಂ ಎಂದು ನಮೂದಿಸಿದೆ ಎಂದರೆ ಸರಿ. ನಿಪಿ–12 ರ correctness certificate ನಲ್ಲಿ ಗಾಂಜಾದ ತೂಕ ಕೇವಲ 6 ಕೆ.ಜಿ 290 ಗ್ರಾಂ ಇದೆ ಎಂದರೆ ಸಾಕ್ಷಿಯು ಪಂಚನಾಮೆ ಕಾಲಕ್ಕೆ ಗಾಂಜಾ ಸೊಪ್ಪು ಹಸಿರು ಮತ್ತು ನೀಲಿಯಿಂದ ಕೂಡಿದ್ದು, ಅದು ತೂಕ ಮಾಡುವ ಕಾಲಕ್ಕೆ ಒಣಗಿದ್ದರಿಂದ ತೂಕದಲ್ಲಿ ವ್ಯತ್ಯಾಸವಾಗಿದೆ ಎನ್ನುತ್ತಾರೆ. ಕೇವಲ 5 ದಿನಗಳಲ್ಲಿ 2 ಕೆ.ಜಿ ಅಷ್ಟು ಗಾಂಜಾ ತೂಕ ಕಡಿಮೆಯಾಗಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಅಂತಿಮ ದೋಷರೋಪಣ ಪತ್ರದಲ್ಲಿ ಗಾಂಜಾ ಸೊಪ್ಪಿನ ತೂಕ ಕಡಿಮೆಯಾಗಿರುವ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ.

19. ಫೋಟೋಗಳನ್ನು ಯಾರ ಮೊಬೈಲ್ ನಿಂದ ತೆಗೆಸಲಾಯಿತು ಮತ್ತು ಎಲ್ಲಿ ಪ್ರಿಂಟ್ ಹಾಕಿಸಲಾಯಿತು ಎನ್ನುವ ಬಗ್ಗೆ ನಾನು ವಿಚಾರಣೆ ಮಾಡಿಲ್ಲ ಎಂದರೆ ಸರಿ. ತೂಕದ ಯಂತ್ರ ಸರಿಯಾದ ಮಾಪನವನ್ನು ತೋರಿಸುತ್ತಿದ್ದ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ.

**ಇನ್ನುಳಿದಂತೆ 2 ನೇ ಆರೋಪಿಯ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿಯುತ್ತಾರೆ.**

**ಮರುವಿಚಾರಣೆ:** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-
**(ಟಿ. ಪಿ. ರಾಮಲಿಂಗೆ ಗೌಡ)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**